# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2551/ಶ್ರೀ ವಿಶ್ವಾವಸು ನಾಮ ಸಂವತ್ಸರ

ಪುಟ : ೪ ಸಂಪುಟ : ೭೧ ಸಂಚಿಕೆ : ೦೭

**15-07-2025 ಆಷಾಢ ಮಾಸ : ಕೃಷ್ಣ ಪಕ್ಷ ಮಂಗಳವಾರ**

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

**ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು**

**ಶುಭಾಶೀರ್ವಚನ** ಶ್ರೀ ಕ್ಷೇತ್ರ ಹೊಂಬುಜ

## "ಜೈನ ಧರ್ಮದಲ್ಲಿ ಗುರು ಪರಂಪರೆ"



ಭಾರತೀಯ ಸಂಸ್ಕೃತಿಯಲ್ಲಿ "ಗುರು" ವಿನ ಸ್ಥಾನ ಮಹತ್ತ್ವಪೂರ್ಣವಾಗಿದೆ. ಲೌಕಿಕ ವಿದ್ಯೆಯಿರಲಿ, ಆಧ್ಯಾತ್ಮವಿರಲಿ ಯಾವುದನ್ನು ಅರಿವಿಗೆ ಬರುವ ರೀತಿ ಕಲಿಸುವ (ಹೇಳಿಕೊಡುವ) ವಿಶೇಷ ವ್ಯಕ್ತಿಯೇ "ಗುರು"ವಾಗಿರುತ್ತಾರೆ. ಬಾಲ್ಯದಲ್ಲಿ ತೊದಲು ನುಡಿಯಿಂದ, ನಡೆಯಲು ಕಲಿಯುವವರೆಗೂ ತಂದೆ-ತಾಯಿಗಳು ಗುರುವೇ. ಶಾಲೆಯಲ್ಲಿ ಬಂದ ಮೇಲೆ ಅಕ್ಷರ, ಸಂಸ್ಕಾರವನ್ನು ಹೇಳಿಕೊಡುವವರು (ಆಧ್ಯಾತ್ಮಿಕ) ಗುರುಗಳೇ ಜೀವನ ನಿರ್ಮಾಣದಲ್ಲಿ ಉತ್ತಮ ಸ್ನೇಹಿತರು ಗುರುಗಳಿದ್ದಂತೆ ಎಂದು ಹಿರಿಯರು ಹೇಳುತ್ತಾರೆ.

WWW.HOMBUJAPADMAVATI.ORG

ಆಧ್ಯಾತ್ಮಕತೆಯ ದೃಷ್ಟಿಯಿಂದ ಪ್ರತಿಯೊಂದು ಧರ್ಮಗಳಲ್ಲೂ ಗುರುವಿನ ಮಹತ್ತ್ವವಿದೆ. ಉತ್ತಮ ಸಂಸ್ಕಾರ ನೀಡುವುದರ ಜೊತೆಗೆ ಆತ್ಮನ ಅಂಧಕಾರವನ್ನು ದೂರಮಾಡಿ ಮೋಕ್ಷ ಪ್ರಾಪ್ತಿಗೆ ಉಪಾಯವನ್ನು ಹೇಳಿಕೊಡುವ ಗುರುವಿನ ಸ್ಥಾನ ಅಜರಾಮರ.

ಧರ್ಮಜ್ಞಾಧರ್ಮಕರ್ತಾಚ ಸದಾ ಧರ್ಮಪರಾಯಣಃ।
ತತ್ತ್ವೇಭ್ಯಃ ಸರ್ವಶಾಸ್ತ್ರಾರ್ಥಾದೇಶಕೋ ಗುರುರುಚ್ಯತೇ ॥

ಧರ್ಮವನ್ನು ತಿಳಿದವರು, ಧರ್ಮದಂತೆ ಆಚರಣೆ ಮಾಡುವವರು ಧರ್ಮ ಪರಾಯಣ ಹಾಗೂ ಎಲ್ಲಾ ಶಾಸ್ತ್ರಗಳನ್ನು ತಿಳಿದು ತತ್ತ್ವಗಳ ಆದೇಶ ಮಾಡುವವರನ್ನು "ಗುರು" ವೆನ್ನುತ್ತಾರೆ.

ಜೈನ ಧರ್ಮದಲ್ಲಿ ಪರಮಗುರು ತೀರ್ಥಂಕರ (ಜಿನ)ರಿದ್ದಾರೆ. 24 ಜನ ತೀರ್ಥಂಕರರು ಜೀವವು ಜನನ-ಮರಣಗಳಿಂದ ಕೂಡಿದ ಸಂಸಾರದಿಂದ ಮುಕ್ತನಾಗುವ ಉಪಾಯವನ್ನು ಸ್ವಂತ ಅನುಸರಿಸಿ, ಇತರರಿಗೆ ಮಾರ್ಗದರ್ಶಕರಾಗಿರುತ್ತಾರೆ. ಆಚಾರ್ಯ, ಉಪಾಧ್ಯಾಯ ಮತ್ತು ಸಾಧು (ನಿಗ್ರಂಥ) ಗಳನ್ನು ಗುರುಗಳೆಂದು ಅವರ ಮಾರ್ಗದರ್ಶನದಲ್ಲಿ ಸಾಗುತ್ತಾರೆ.

ದೀಕ್ಷಾಗುರು, ಶಿಕ್ಷಾ (ವಿದ್ಯೆ) ಗುರು, ಪರಮಗುರು ಇತ್ಯಾದಿ ಭೇದಗಳಲ್ಲಿ ಗುರುವಿನ ಸ್ಥಾನವನ್ನು ಸಜ್ಜನರು ಸ್ವೀಕರಿಸುತ್ತಾರೆ. ಸಮ್ಯಕ್ತ್ವ ಸಂಪನ್ನ (ವ್ರತಿ, ಸಜ್ಜನ) ಶ್ರಾವಕರು ಕೂಡ ಗುರುವಿನ ಸ್ಥಾನ ತುಂಬುತ್ತಾರೆ.

### ಜೈನ ಧರ್ಮದಲ್ಲಿ ಗುರು ಪರಂಪರೆ/ಪ್ರಾತಃ ಸ್ಮರಣೀಯರು:

ವರ್ತಮಾನ ಕಾಲದಲ್ಲಿ 24 ತೀರ್ಥಂಕರರು ಹಾಕಿಕೊಟ್ಟ ಮಾರ್ಗದಲ್ಲೇ ಆಗಮ ರಚನೆ, ಪ್ರಚಾರ, ಪ್ರಭಾವನೆಗಳು ಸಾಗಿ ಬಂದಿದೆ.

ಅಂತಿಮ ತೀರ್ಥಂಕರ ಭಗವಾನ ಮಹಾವೀರರು ಕೊಟ್ಟ ಉಪದೇಶವನ್ನು ಗಣಧರರು ಸಂಗ್ರಹಿಸಿ ಆಗಮ (ಶಾಸ್ತ್ರ) ರಚಿಸಿರುತ್ತಾರೆ. ನಂತರ ಅನೇಕ ಆಚಾರ್ಯರು ಮುಂದುವರಿಸುತ್ತಾ ಬಂದಿರುತ್ತಾರೆ.

1) **ಗೌತಮ ಗಣಧರ** - ಭಗವಾನ ಮಹಾವೀರರ ಸಮವಸರಣದಲ್ಲಿ ದ್ವಾದಶಾಂಗ ಶಾಸ್ತ್ರಗಳನ್ನು ರಚಿಸಿದ ಪ್ರಮುಖರು ಸ್ವತಃ ಕೇವಲಿಗಾಗಿ ಉಪದೇಶವನ್ನು ಕೊಟ್ಟಿರುತ್ತಾರೆ.

2) **ಅಂತಿಮ ಶ್ರುತಕೇವಲಿ (ಭದ್ರಬಾಹು)** - ದ್ವಾದಶಾಂಗ ಶಾಸ್ತ್ರಗಳನ್ನು (ಕ್ರಿ.ಪೂ. 492-515) ನೆನಪಿನಲ್ಲಿಡಲು ಅಶಕ್ತರಾಗುವ ಕಾಲ ಸಮೀಪಿಸಿತ್ತು. ಅದೇ ಸಂದರ್ಭದಲ್ಲಿ ಉತ್ತರ ಭಾರತದಲ್ಲಿ ಭಯಂಕರ ಕ್ಷಾಮ ಉಂಟಾದಾಗ ಸಾಮ್ರಾಟ್ ಚಂದ್ರಗುಪ್ತ ಮೌರ್ಯನು ಭದ್ರಬಾಹು ಮುನಿಗಳಾದಿ 12 ಸಾವಿರ ಸಾಧುಗಳನ್ನು ಕರ್ನಾಟಕಕ್ಕೆ ಕರೆತಂದನು. ಅವರಿಂದ ಆಗಮ ರಕ್ಷಣೆಯಾಗಿತು.

3) **ಆಚಾರ್ಯ ಕುಂದಕುಂದರು** ಜೈನ ಆಚಾರ್ಯ ಪರಂಪರೆಯಲ್ಲಿ ವಿಶೇಷ ಸ್ಥಾನವನ್ನು ಹೊಂದಿರುತ್ತಾರೆ. 80ಕ್ಕೂ ಹೆಚ್ಚು ಪ್ರಾಕೃತ ಭಾಷೆಯಲ್ಲಿ "ಪಾಹುಡ" ಗ್ರಂಥಗಳನ್ನು ರಚಿಸಿರುತ್ತಾರೆ.

4) **ಆಚಾರ್ಯ ಧರಸೇನ**- ಇವರ ಕಾಲಕ್ಕೆ ದ್ವಾದಶಾಂಗಶಾಸ್ತ್ರ ಆಂಶಿಕವಾಗಿ ಉಳಿದಿತ್ತು. ಅದನ್ನು ಭೂತಬಲಿ, ಪುಷ್ಪದಂತ ಮುನಿಗಳಿಗೆ ಹೇಳಿಕೊಡುತ್ತಾರೆ. ಅಲ್ಲಿಯವರೆಗೆ ಮೌಖಿಕವಾಗಿ ಬಂದಿದ್ದ ಆಗಮ ಪರಂಪರೆಯು ಲಿಪಿಬದ್ಧವಾಗಿ ಸಂರಕ್ಷಿತವಾಯಿತು.

2ನೇ ಪುಟಕ್ಕೆ

ಆಚಾರ್ಯ ಶ್ರೀ 108 ವಿದ್ಯಾನಂದ ಮಹಾರಾಜರ ಶತಮಾನೋತ್ಸವ ಸಮಾರಂಭ

## ಪ್ರಧಾನಿ ನರೇಂದ್ರ ಮೋದಿಗೆ 'ಧರ್ಮ ಚಕ್ರವರ್ತಿ' ಬಿರುದು ಪ್ರದಾನ




**ನವದೆಹಲಿ :** ಇಲ್ಲಿಯ ವಿಜ್ಞಾನ ಭವನದಲ್ಲಿ ಸಂಸ್ಕೃತಿ ಸಚಿವಾಲಯ ಹಾಗೂ ಭಗವಾನ ಮಹಾವೀರ ಅಹಿಂಸಾ ಭಾರತಿ ಟ್ರಸ್ಟ್‌ನ ಸಹಯೋಗದೊಂದಿಗೆ ಜೂ. 28ರ ಶನಿವಾರದಂದು ಆಯೋಜಿಸಿದ್ದ ಆಚಾರ್ಯ ಶ್ರೀ ವಿದ್ಯಾನಂದ ಮಹಾರಾಜರ ಜನ್ಮ ಶತಮಾನೋತ್ಸವ ಕಾರ್ಯಕ್ರಮವನ್ನು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಉದ್ಘಾಟಿಸಿ, ಆಚಾರ್ಯ ಶ್ರೀ ಪ್ರಜ್ಞಾಸಾಗರ ಮಹಾರಾಜರು ಹಾಗೂ ಶ್ರವಣಬೆಳಗೊಳ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಮಹಾಸ್ವಾಮೀಜಿಯವರ ಆಶೀರ್ವಾದ ಪಡೆದರು.

ಪ್ರಧಾನಿಯವರು ಮಾತನಾಡಿ, ಜೈನ ನೀತಿಶಾಸ್ತ್ರ, ಪ್ರಾಕೃತ ಸಾಹಿತ್ಯ ಮತ್ತು ಶಾಸ್ತ್ರೀಯ ಭಾರತೀಯ ಚಿಂತನೆಯ ಕುರಿತು 50ಕ್ಕೂ ಹೆಚ್ಚು ಗ್ರಂಥಗಳನ್ನು ಬರೆದ ಆಚಾರ್ಯ ಶ್ರೀ ವಿದ್ಯಾನಂದ ಮಹಾರಾಜರು ಹಲವಾರು ಐತಿಹಾಸಿಕ ಜೈನ ದೇವಾಲಯಗಳ ಪುನರುಜ್ಜೀವನ ಮತ್ತು ಸಾಂಪ್ರದಾಯಿಕ ಶಿಕ್ಷಣದ ಪ್ರಚಾರದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ಪ್ರಯತ್ನಗಳು ಜೈನ ಪರಂಪರೆಯ ಸಂರಕ್ಷಣೆ, ಪ್ರಾಚೀನ ಭಾರತೀಯ ಭಾಷೆಗಳ ಆಸಕ್ತಿಯ ಪುನರುಜ್ಜೀವನಕ್ಕೆ ಗಮನಾರ್ಹವಾದ ಕೊಡುಗೆ ನೀಡಿದೆ ಎಂದರು.

2ನೇ ಪುಟಕ್ಕೆ

ಅಮೇರಿಕಾದ ಚಿಕಾಗೋದಲ್ಲಿ ವಿಶ್ವ ಜೈನಧರ್ಮ ಸಮಾವೇಶ-2025

## "ವಿಶ್ವ ಭ್ರಾತೃತ್ವ, ಧರ್ಮಸಮನ್ವಯತೆ ಸಾರುವ ಜೈನಧರ್ಮ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ






**ಚಿಕಾಗೋ :** **"ದ್ವೇಷ-ಅಸೂಯೆ ತ್ಯಜಿಸಿ ತಾವಿರುವ ರಾಷ್ಟ್ರದ ಪ್ರಗತಿಗೆ ಪೂರಕ ಸಹಕಾರ-ಸಹಾಯ ಮಾಡುವುದು ಮಾನವಧರ್ಮ ಮೂಲ ಸತ್ಯವಾಗಿದೆ. ವಿಶ್ವದಲ್ಲೆಲ್ಲ ಸಂಘರ್ಷ-ಗೊಂದಲ-ಸಮಸ್ಯೆಗಳು ವಿಚಲಿತರನ್ನಾಗಿ ಮಾಡುತ್ತದೆ"** ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರು ಅಮೇರಿಕಾದ ಚಿಕಾಗೋ ನಗರದಲ್ಲಿ ಆಯೋಜಿಸಿದ್ದ ವಿಶ್ವ ಜೈನಧರ್ಮ ಸಮ್ಮೇಳನ-2025 ಸಮಾವೇಶದಲ್ಲಿ ಪ್ರಧಾನ ಪ್ರವಚಕರಾಗಿ ಹೇಳಿದರು.

**'ವಿಶ್ವ ಭ್ರಾತೃತ್ವ, ಧರ್ಮ ಸಮನ್ವಯತೆ ಸಾರುವ ಜೈನಧರ್ಮ ತತ್ವಗಳು ಮಾನವ ಕಲ್ಯಾಣದ ಧರ್ಮದಾರಿದೀಪಗಳಾಗಿವೆ. ಸರಳ, ಸಾತ್ವಿಕ, ಶಾಕಾಹಾರ ಮನೋಧರ್ಮವು ವಿಶ್ವಶಾಂತಿಗೆ ತಳಹದಿಯಾಗುವುದು ನಿಶ್ಚಿತ'** ಎಂದು ಮಹಾವೀರ ತೀರ್ಥಂಕರರು ಬೋಧಿಸಿದ ಉಪದೇಶಗಳ ಬಗ್ಗೆ ವ್ಯಾಖ್ಯಾನ ಮಾಡಿದರು.

ವಿವಿಧ ಧಾರ್ಮಿಕ ಗುರುಗಳ, ವಿದ್ವಾಂಸರ ಭೇಟಿ ಮಾಡಿ ಧರ್ಮ ಚರ್ಚೆ-ವಿಚಾರ ವಿನಿಮಯ ಮಾಡಿದರು. ಧರ್ಮಸಂವಾದದಲ್ಲಿ ಅನೇಕ ಜಿಜ್ಞಾಸೆಗಳನ್ನು ಪರಿಹರಿಸಿದರು. ಪರಮಪೂಜ್ಯ ಶ್ರೀಗಳವರು 'ಪ್ರತಿಯೋರ್ವರೂ ಪ್ರಕೃತಿಯ ಆರಾಧಕರಾಗಿ ನಿಸರ್ಗದ ಸಂಪತ್ತನ್ನು, ಹಸಿರು ವನಗಳನ್ನು ಸಂರಕ್ಷಿಸುವುದು ಆರೋಗ್ಯ ರಕ್ಷಣೆಯ ಮಹತ್ವದ ಅಂಶ' ಎಂದು ವಿವರಿಸಿದರು.

2ನೇ ಪುಟಕ್ಕೆ

## "ಜೈನ ಧರ್ಮದಲ್ಲಿ ಗುರು ಪರಂಪರೆ"

5) **ಆಚಾರ್ಯ ಸಮಂತಭದ್ರ–** ಸಂಸ್ಕೃತ ಭಾಷೆಯಲ್ಲಿ ಅಪ್ರತಿಮವಾದ ಜೈನ ಗ್ರಂಥಗಳನ್ನು ರಚಿಸಿರುತ್ತಾರೆ. ರತ್ನಕರಂಡಕ ಶ್ರಾವಕಾಚಾರದಂತ ಪ್ರಬುದ್ಧ ಗ್ರಂಥಗಳನ್ನು ರಚಿಸಿರುತ್ತಾರೆ.

6) **ಆಚಾರ್ಯ ಪೂಜ್ಯಪಾದ–** ವ್ಯಾಕರಣ, ಆಯುರ್ವೇದ, ಆಗಮ, ಆಧ್ಯಾತ್ಮ ಹೀಗೆ ಅನೇಕ ವಿಶೇಷ ಗ್ರಂಥಗಳನ್ನು ರಚನೆ ಮಾಡಿರುತ್ತಾರೆ.

7) **ಆಚಾರ್ಯ ಜಿನಸೇನ–** 24 ತೀರ್ಥಂಕರರ ಜೀವನಸಾರವನ್ನು ಪೂರ್ವಪುರಾಣದಂತ ಬೃಹತ್ ಗ್ರಂಥವನ್ನು ರಚಿಸಿದರು. ನಂತರ ಕನ್ನಡ ಸಾಹಿತ್ಯಕ್ಕೆ ಪಂಪ, ರನ್ನ, ಜನ್ನರಂತ ಕವಿಶ್ರೇಷ್ಠರು ಸ್ವೀಕರಿಸಿದರು.

ಹೀಗೆ ಅನೇಕ ಆಚಾರ್ಯ ಮುನಿಗಳನ್ನು ಜೈನ ಧರ್ಮದಲ್ಲಿ ಪ್ರಾತಃಸ್ಮರಣೀಯರಾಗಿ ಪೂಜಿಸುತ್ತಾ ಅವರ ಗ್ರಂಥಗಳ ಸ್ವಾಧ್ಯಾಯ ಪರಂಪರೆ ಮುಂದುವರಿಯುತ್ತಾ ಬಂದಿದೆ.

### ಗುರುಪೂರ್ಣಿಮೆ ಮಹತ್ತ್ವ:

ಭಗವಾನ ಮಹಾವೀರರಿಗೆ ಕೇವಲಜ್ಞಾನ (ಸರ್ವಜ್ಞತ್ವ) ಪ್ರಾಪ್ತಿಯಾಗಿ 66 ದಿನಗಳು ಆದ ಮೇಲೆ ಅವರ ಉಪದೇಶವನ್ನು ಭವ್ಯ ಜನರಿಗೆ ಅರ್ಥ ಮಾಡಿಸುವಂತ ಗುರುವಿನ (ಗಣಧರ) ಸ್ಥಾನ ಗೌತಮ ಮುನಿಗಳು ಸಮವಸರಣಕ್ಕೆ ಒಂದು ಸೇರಿದ ದಿನ. ಗುರುವಿನ ಸ್ಥಾನ ಪೂರ್ಣತೆಯಾದ ದಿನವೇ ಆಷಾಡ ಶುಕ್ಲ ಪೂರ್ಣಿಮೆ. ಆ ದಿನವನ್ನೇ "ಗುರುಪೂರ್ಣಿಮೆ" ಎಂದು ಆಚರಿಸುತ್ತಾರೆ.

ಗುರು ಶು ಶ್ರೂಷಯಾ ವಿದ್ಯಾ ಪುಷ್ಕಲೇನ ಧನೇನ ವಾ ।
ಅಥವಾ ವಿದ್ಯಯಾ ವಿದ್ಯಾ ಚತುರ್ಥೋ ನೋಪಲಭ್ಯತೇ ॥

ವಿದ್ಯೆಯು ಗುರುವಿನ ಸೇವೆಯಿಂದ ದೊರೆಯುತ್ತದೆ. ಅವರ ಪ್ರಭಾವದಿಂದ ಅನುಭವ, ಆತ್ಮಬಲ ಹೆಚ್ಚುತ್ತದೆ.

'ಗುರುವಿನ ಗುಲಾಮನಾಗದೊಡೆ ದೊರೆಯದು ಮುಕ್ತಿ'

(ಜುಲೈ 05ರ ಬೋಧಿವೃಕ್ಷ ಪತ್ರಿಕೆಯಲ್ಲಿ ಪ್ರಕಟಗೊಂಡ ಪೂಜ್ಯ ಸ್ವಾಮೀಜಿಯವರ ಲೇಖನ)

## 30ನೇ ವಾರ್ಷಿಕ ಪೂಜಾ ಮಹೋತ್ಸವ ಹಾಗೂ ಪುರಪ್ರವೇಶ

## "ಭಗವಂತರ ಬಗ್ಗೆ ಭಕ್ತಿ, ಭಾವ ಅಗತ್ಯ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ





ಬೆಂಗಳೂರು : ಪುರಾತನ ಕಾಲದಿಂದಲೂ ಜೈನ ಧರ್ಮದಲ್ಲಿ ಭಕ್ತಿ, ಶ್ರದ್ಧೆ, ಸಂಸ್ಕೃತಿ, ಸಂಸ್ಕಾರ ಪದ್ಧತಿ ಇದ್ದು, ಜೈನ ಧರ್ಮಿಯರು ನಿತ್ಯ ಬಸದಿಯ ದರ್ಶನ ಮಾಡುವ ಪದ್ಧತಿ ಬೆಳೆಸಿಕೊಳ್ಳಬೇಕೆಂದು ಹೊಂಬುಜ ಜೈನಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು ಜೂನ್, 22, 2025ರ ಭಾನುವಾರದಂದು ನಗರದ ಪುಟ್ಟೆನಹಳ್ಳಿಯ ಭ. ಶ್ರೀ 1008 ಶೀತಲನಾಥ ತೀರ್ಥಂಕರ ಜೈನ ಬಸದಿಯ ವಾರ್ಷಿಕ ಪೂಜಾ ಮಹೋತ್ಸವದ ಪಾವನ ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು.

ಭೂಮಿಯಲ್ಲಿ ತೀರ್ಥಂಕರರು ಧರ್ಮದ ರಕ್ಷಣೆಗಾಗಿ ನೆಲೆಸಿದ್ದಾರೆ. ನಮ್ಮ ಧರ್ಮ ಭೂಮಿಯಲ್ಲಿ ಸಂಸ್ಕಾರ ಭಾವನೆ ಇರುವುದರಿಂದ ಇದು ಧರ್ಮಭೂಮಿಯಾಗಿದೆ. ಭಗವಂತನ ಬಗ್ಗೆ ಭಕ್ತಿ ಭಾವ ಅಗತ್ಯ ಎಂದರು.

ಎಲ್ಲರೂ ಧರ್ಮವನ್ನು ಪಾಲಿಸಿದಾಗ ಕರ್ಮ ನಾಶವಾಗಲಿದೆ. ಯಾವುದು ಬೇಕು–ಬೇಡ ಎನ್ನುವುದು ಸ್ವಂತ ನಿರ್ಧಾರವಾಗಿದ್ದು, ಒಳ್ಳೆಯ ಭಾವನೆ ಕೆಲಸ ಪರೋಪಕಾರ ಅಗತ್ಯ ಇದರಿಂದ ಧರ್ಮದ ಉಳಿವು ಸಾಧ್ಯ. ತಮ್ಮ ನಿಜಗುಣದಿಂದ ದೇವರನ್ನು ಪೂಜಿಸಬೇಕೆಂದರು.

ಅಂದು ಬೆಳಿಗ್ಗೆ ಶ್ರವಣಬೆಳಗೊಳ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿಗಳವರ ಪುರಪ್ರವೇಶ ಅದ್ಧೂರಿಯಾಗಿ ನಡೆಯಿತು.

ಅಂದು ಬೆಳಿಗ್ಗೆ ಅಗ್ರೋಧಕ ಉತ್ಸವ ಹಾಗೂ ನಿತ್ಯಪೂಜೆ, ಭಗವಾನ ಶ್ರೀ 1008 ಶೀತಲನಾಥ ತೀರ್ಥಂಕರರಿಗೆ 108 ಕಳಸಗಳಿಂದ ಮಹಾಭಿಷೇಕ, ಪಂಚಾಮೃತ ಅಭಿಷೇಕ ಮತ್ತು ಮಹಾಮಂಗಳಾರತಿ ನಂತರ ಪರಮಪೂಜ್ಯ ಶ್ರೀಗಳವರ ಸಾನಿಧ್ಯದಲ್ಲಿ ಧಾನಿಗಳಿಗೆ ಸನ್ಮಾನ, ಪರಮಪೂಜ್ಯ ಶ್ರೀಗಳವರ ಆಶೀರ್ವಚನ, ಪಾದಪೂಜೆ ಕಾರ್ಯಕ್ರಮಗಳು ಪುರೋಹಿತರಾದ ಪ್ರತಿಷ್ಠಾಚಾರ್ಯ ಪಾರ್ಶ್ವನಾಥ್ ಜಿ. ರವರು ನೆರವೇರಿದವು. ಟ್ರಸ್ಟ್‌ನ ಪದಾಧಿಕಾರಿಗಳು ಹಾಗೂ ಎಲ್ಲಾ ಟ್ರಸ್ಟಿಗಳು ಸ್ವಾಗತಿಸಿದರು. ಬೆಂಗಳೂರಿನ ಮಾನವಿ ಮಹಿಳಾ ಸಮಾಜದ ಸಹಯೋಗದೊಂದಿಗೆ ನಡೆದ ಕಾರ್ಯಕ್ರಮದಲ್ಲಿ ಶ್ರಾವಕ–ಶ್ರಾವಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.



**ಜಿನ-ದನಿ**

ಆಯ–ವಯಾಣ ವಿಣ್ಣಾಣೀ, ಅತ್ಥಸ್ಸ ಹು ಪಬಂಧಗಂ ।
ಕಮಂಡಲುವ್ವ ಹೊದವ್ವೋ, ಅತ್ಥಸ್ಸ ಸುಪಬಂಧಣಂ ॥

ಅರ್ಥ: ಹಣಕಾಸಿನ ವ್ಯವಹಾರ ಮಾಡುವವನಿಗೆ ಲಾಭ–ಹುಡುಕಿಕೆಯಲ್ಲಿ ವಿಜ್ಞಾನಿಯಾಗಿರಬೇಕು, ಅರ್ಥದ (ಸಂಪತ್ತು) ಸುಪ್ರಬಂಧನಕಮಂಡಲುವಿನ ಹಾಗೆ ಇರಬೇಕು.

## ಬರಲಿರುವ ಪರ್ವದಿನಗಳು

ವಿಶ್ವಾವಸುನಾಮ ಸಂವತ್ಸರದ

ಆಷಾಢಮಾಸ ಕೃಷ್ಣಪಕ್ಷ ಚತುರ್ದಶಿಯಿಂದ ಶ್ರಾವಣಮಾಸ ಕೃಷ್ಣಪಕ್ಷ ಸಪ್ತಮಿಯವರೆಗೆ

**ಆಷಾಢ ಮಾಸ**

ಜು. 23 ಬುಧ–ಚತುರ್ದಶಿ–ಆರಿದ್ರಾ
ಜು. 24 ಗುರು–ಅಮವಾಸ್ಯೆ–ಪುನರ್ವಸು

**ಶ್ರಾವಣ ಮಾಸ**

**ಜು. 25 ಶುಕ್ರ–ಪ್ರತಿಪದ–ಪುಷ್ಯ, ಶ್ರೀಕ್ಷೇತ್ರ ಹೊಂಬುಜದಲ್ಲಿ 1ನೇ ಸಂಪತ್ ಶುಕ್ರವಾರ.**
ಜು. 26 ಶನಿ–ಬಿದಿಗೆ–ಆಶ್ಲೇಷ
ಜು. 27 ಭಾನು–ತದಿಗೆ–ಮಘಾ
ಜು. 28 ಸೋಮ–ಚತುರ್ಥಿ–ಪೂರ್ವಾ
ಜು. 29 ಮಂಗಳ–ಪಂಚಮಿ–ಉತ್ತರ
ಜು. 30 ಬುಧ–ಷಷ್ಠಿ–ಹಸ್ತ
**ಜು. 31 ಗುರು–ಸಪ್ತಮಿ–ಚಿತ್ತಾ, ಮುಕುಟ ಸಪ್ತಮಿ**
**ಆ. 01 ಶುಕ್ರ–ಅಷ್ಟಮಿ–ಸ್ವಾತಿ, ಶ್ರೀಕ್ಷೇತ್ರ ಹೊಂಬುಜದಲ್ಲಿ 2ನೇ ಸಂಪತ್ ಶುಕ್ರವಾರ, ವರಮಹಾಲಕ್ಷ್ಮೀವ್ರತ**
ಆ. 02 ಶನಿ–ಅಷ್ಟಮಿ–ವಿಶಾಖ,
ಆ. 03 ಭಾನು–ನವಮಿ–ವಿಶಾಖ
ಆ. 04 ಸೋಮ–ದಶಮಿ–ಅನುರಾಧ
ಆ. 05 ಮಂಗಳ–ಏಕಾದಶಿ–ಜ್ಯೇಷ್ಠಾ
ಆ. 06 ಬುಧ–ದ್ವಾದಶಿ–ಮೂಲ
ಆ. 07 ಗುರು–ತ್ರಯೋದಶಿ–ಪೂ.ಷಾಢ
**ಆ. 08 ಶುಕ್ರ–ಚತುರ್ದಶಿ–ಉ.ಷಾಢ, ಶ್ರೀಕ್ಷೇತ್ರ ಹೊಂಬುಜದಲ್ಲಿ 3ನೇ ಸಂಪತ್ ಶುಕ್ರವಾರ,**
**ಆ. 09 ಶನಿ–ಹುಣ್ಣಿಮೆ–ಶ್ರವಣ, ರಕ್ಷಾ ಬಂಧನ, ಶ್ರೀಕ್ಷೇತ್ರ ಹೊಂಬುಜದಲ್ಲಿ ಯಜ್ಞೋಪವೀತ ಧಾರಣೆ (ಜನಿವಾರದ ಹಬ್ಬ)**
ಆ. 10 ಭಾನು–ಪ್ರತಿಪದ–ಧನಿಷ್ಠಾ
ಆ. 11 ಸೋಮ–ಬಿದಿಗೆ–ಶತಭಿಷಾ
ಆ. 12 ಮಂಗಳ–ತದಿಗೆ–ಪೂ.ಭಾದ್ರ
ಆ. 13 ಬುಧ–ಚತುರ್ಥಿ–ಪಂಚಮಿ–ಉ.ಭಾದ್ರ
ಆ. 14 ಗುರು–ಷಷ್ಠಿ–ರೇವತಿ
**ಆ. 15 ಶುಕ್ರ–ಸಪ್ತಮಿ–ಅಶ್ವಿನಿ, ಶ್ರೀಕ್ಷೇತ್ರ ಹೊಂಬುಜದಲ್ಲಿ 4ನೇ ಸಂಪತ್ ಶುಕ್ರವಾರ,**

## ಪ್ರಧಾನಿ ನರೇಂದ್ರ ಮೋದಿಗೆ 'ಧರ್ಮ ಚಕ್ರವರ್ತಿ' ಬಿರುದು ಪ್ರದಾನ

1ನೇ ಪುಟದಿಂದ

WWW.HOMBUJAPADMAVATI.ORG

ಈ ಸಂದರ್ಭದಲ್ಲಿ ನೀವು ನನಗೆ 'ಧರ್ಮ ಚಕ್ರವರ್ತಿ' ಎಂಬ ಬಿರುದು ನೀಡಿ ಗೌರವಿಸಿದ್ದೀರಿ. ನಾನು ಅದಕ್ಕೆ ಸೂಕ್ತನಲ್ಲ ಎಂದು ಭಾವಿಸುತ್ತೇನೆ. ಆದರೆ ಸಂತರಿಂದ ನಾವು ಏನೇ ಸ್ವೀಕರಿಸಿದ್ದರೂ ಅದನ್ನು ಪ್ರಸಾದ ಎಂದು ಸ್ವೀಕರಿಸುವುದು ನಮ್ಮ ಸಂಸ್ಕೃತಿ. ಆದ್ದರಿಂದ ನಾನು ಈ ಪ್ರಸಾದವನ್ನು ವಿನಮ್ರವಾಗಿ ಸ್ವೀಕರಿಸುತ್ತೇನೆ ಮತ್ತು ಅದನ್ನು ತಾಯಿ ಭಾರತಿಗೆ ಅರ್ಪಿಸುತ್ತೇನೆ ಎಂದು ತಮ್ಮ ಭಾಷಣದಲ್ಲಿ ಹೇಳಿದರು.

ಈ ವೇಳೆ ಆಚಾರ್ಯ ವಿದ್ಯಾನಂದ ಮಹಾರಾಜರ ಭಾವಚಿತ್ರ ಇರುವ ಒಂದು ನೂರು ರೂಪಾಯಿ ಮುಖಬೆಲೆಯ ನಾಣ್ಯ ಹಾಗೂ ಸ್ಟ್ಯಾಂಪ್‌ನ್ನು ಪ್ರಧಾನಿಯವರು ಬಿಡುಗಡೆ ಮಾಡಿದರು. ಶತಮಾನೋತ್ಸವ ಆಚರಣೆಯು ಆಧ್ಯಾತ್ಮಿಕ ನಾಯಕನಿಗೆ ವರ್ಷಪೂರ್ತಿ ರಾಷ್ಟ್ರೀಯ ಗೌರವ ಸಲ್ಲಿಸುವ ಔಪಚಾರಿಕ ಆರಂಭವನ್ನು ಸೂಚಿಸುತ್ತದೆ. ಇದನ್ನು ಕೇಂದ್ರ ಸಂಸ್ಕೃತಿ ಸಚಿವಾಲಯವು ದೆಹಲಿಯ ಭಗವಾನ ಮಹಾವೀರ ಅಹಿಂಸಾ ಭಾರತಿ ಟ್ರಸ್ಟ್ ಸಹಯೋಗದೊಂದಿಗೆ ಅದ್ದೂರಿಯಾಗಿ ಆಯೋಜಿಸಲಾಗಿತ್ತು.

## "ವಿಶ್ವ ಭ್ರಾತೃತ್ವ, ಧರ್ಮಸಮನ್ವಯತೆ ಸಾರುವ ಜೈನಧರ್ಮ"

1ನೇ ಪುಟದಿಂದ





ಈ ಸಂದರ್ಭದಲ್ಲಿ ಗುರು ಆಚಾರ್ಯ ಡಾ. ಲೋಕೇಶ್ ಮುನಿ, ಧರ್ಮಸ್ಥಳದ ಶ್ರೀ ಸುರೇಂದ್ರಕುಮಾರ್, ಶ್ರೀಮತಿ ಅನಿತಾ ಸುರೇಂದ್ರ ಕುಮಾರ್‌ರವರು ಭಾಗವಹಿಸಿದ್ದರು.

### ಅಮೇರಿಕಾದ ಚಿಕಾಗೋದಲ್ಲಿ ವಿಶ್ವ ಜೈನಧರ್ಮ ಸಮಾವೇಶ-2025

# "ಅಹಿಂಸಾ ಭಾವದಿಂದ ಮಾನವೀಯ ಮೌಲ್ಯ ಉದ್ದೀಪನ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ




**ಚಿಕಾಗೋ:** 'ಅಹಿಂಸಾ ಭಾವವು ಮಾನವೀಯ ಮೌಲ್ಯಗಳನ್ನು ಉದ್ದೀಪನಗೊಳಿಸುತ್ತದೆ. ಇಂದು ವಿಶ್ವಮೈತ್ರಿ, ಸಹೋದರತ್ವ ವರ್ಧಿಸಬೇಕು. ಜೈನ ಧರ್ಮದ ಉಪದೇಶಗಳು ಪರಸ್ಪರ ವಾತ್ಸಲ್ಯಮಯ ಜೀವನ ನಿರ್ವಹಣೆಯನ್ನು ಕಲಿಸುತ್ತದೆ' ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರು ಪ್ರವಚನದಲ್ಲಿ ತಿಳಿಸಿದರು.

ಅವರು ಅಮೇರಿಕಾದ ಚಿಕಾಗೋ ನಗರದಲ್ಲಿ ಜುಲೈ 03 ರಿಂದ 06ರವರೆಗೆ ನಡೆಯುತ್ತಿರುವ 'ವಿಶ್ವ ಜೈನಧರ್ಮ ಸಮ್ಮೇಳನ'ದಲ್ಲಿ ಆಹ್ವಾನದ ಮೇರೆಗೆ ಪಾಲ್ಗೊಂಡು **'ಸೇವಾ ಮನೋಧರ್ಮ ಪಾಲಿಸಿದಾಗ ನವ ಸಮಾಜದಲ್ಲಿ ಸುಖ ಸಂತಸ ಉಂಟಾಗುವುದು. ದೇಶ ದೇಶಗಳು ಅನ್ಯೋನ್ಯತೆಯಿಂದಿರಬೇಕಲ್ಲದೇ ವೈರತ್ವ ಬೆಳೆಸಬಾರದು'** ಎಂದರು.

ಸ್ವಸ್ತಿಶ್ರೀಗಳವರು ಹೊಂಬುಜದ ಪೂರ್ವ ಭಟ್ಟಾರಕರಾಗಿದ್ದ ಕೀರ್ತಿಶೇಷ ಸ್ವಸ್ತಿಶ್ರೀ ಹೇಮರತ್ನ ಸಾಗರ ದೇವೇಂದ್ರಕೀರ್ತಿ ಮಹಾಸ್ವಾಮಿಜಿಗಳವರು ಅಮೇರಿಕಾ ದೇಶದಲ್ಲಿ ಅನೇಕ ಪ್ರವಚನಗಳನ್ನು ನೀಡಿ, ಜೈನಧರ್ಮ ಪ್ರಸಾರ, ಪ್ರಭಾವನೆ ಮಾಡಿದ್ದಾರೆ ಎಂದು ಸ್ಮರಿಸಿದರು. ಸರ್ವರನ್ನೂ ಆಶೀರ್ವದಿಸಿ, ಹರಸಿದರು.

ಈ ಸಂದರ್ಭದಲ್ಲಿ ಗುರು ಆಚಾರ್ಯ ಡಾ. ಲೋಕೇಶ್ ಮುನಿ, ಧರ್ಮಸ್ಥಳದ ಶ್ರೀ ಸುರೇಂದ್ರಕುಮಾರ್, ಶ್ರೀಮತಿ ಅನಿತಾ ಸುರೇಂದ್ರ ಕುಮಾರ್‌ರವರು ಭಾಗವಹಿಸಿದ್ದರು.

## ಎಸ್. ಜಿತೇಂದ್ರಕುಮಾರ್‌ಗೆ ಬಿಎಂಶ್ರೀ ಪ್ರತಿಷ್ಠಾನದ ದತ್ತಿ ಪ್ರಶಸ್ತಿ



**ಬೆಂಗಳೂರು :** 'ಸಾಹಿತ್ಯ, ಸಂಸ್ಕೃತಿ ಹಾಗೂ ಶಾಸ್ತ್ರಗಳನ್ನು ಪೋಷಿಸಿ ಮುಂದಿನ ಪೀಳಿಗೆಗೆ ರವಾನಿಸಬೇಕು' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪದ್ಮರಾಜ ಎನ್. ದೇಸಾಯಿ ತಿಳಿಸಿದರು. ಇವರು ಬಿ.ಎಂ.ಶ್ರೀ ಪ್ರತಿಷ್ಠಾನದಿಂದ 'ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ' ದತ್ತಿ ಪ್ರಶಸ್ತಿಯನ್ನು ಜೈನ ಸಾಹಿತ್ಯ, ಸಂಸ್ಕೃತಿ ಪ್ರಚಾರಕ ಎಸ್. ಜಿತೇಂದ್ರ ಕುಮಾರ್‌ರಿಗೆ ಜು. 07ರ ಭಾನುವಾರದಂದು ಪ್ರದಾನ ಮಾಡಿ ಮಾತನಾಡಿದರು. ಜೈನ ಸಮಾಜದ ಚಿಂತನ, ಜೈನ ಸಾಹಿತ್ಯ ಹಾಗೂ ಗ್ರಂಥ ಪುರಾಣಗಳನ್ನು ಪರಿಷ್ಕರಿಸಿ ಮನೆ-ಮನೆಗೆ ತಲುಪಿಸುವ ಕಾರ್ಯವನ್ನು ಜಿತೇಂದ್ರ ಕುಮಾರ್ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಜೈನ ಸಾಹಿತ್ಯ ಉಳಿಸಿ, ಬೆಳೆಸಿ, ಪೋಷಣೆ ಮಾಡುವ ವ್ಯಕ್ತಿಗೆ ಪದ್ಮಾವತಮ್ಮ ದತ್ತಿ ಪ್ರಶಸ್ತಿಯನ್ನು ಬಿಎಂಶ್ರೀ ಪ್ರತಿಷ್ಠಾನ ನೀಡುತ್ತಿದೆ. ಈ ಬಾರಿ ಕರ್ನಾಟಕ ಜೈನ್ ಅಸೋಸಿಯೇಷನ್ ಅಧ್ಯಕ್ಷರೂ ಆಗಿರುವ ಎಸ್. ಜಿತೇಂದ್ರಕುಮಾರ್ ಅವರಿಗೆ ನೀಡಲಾಗಿದೆ ಎಂದು ಹೇಳಿದರು. 'ಗೊಮ್ಮಟ ಸ್ತುತಿ' ಪುಸ್ತಕ ಜನಾರ್ಪಣೆ ಮಾಡಿದ ಸಾಹಿತಿ ಹಂ.ಪ. ನಾಗರಾಜಯ್ಯ ಮಾತನಾಡಿ, ಚಾವುಂಡರಾಯನು ಶ್ರವಣಬೆಳಗೊಳದಲ್ಲಿ ಭಗವಾನ ಬಾಹುಬಲಿ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಸಂದರ್ಭದಲ್ಲಿ ಅವನ ಗುರುಗಳಾದ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ರಚಿಸಿದ ಸ್ತುತಿ ಇದು ಎಂದು ಕಿರುಹೊತ್ತಿಗೆಯ ಪರಿಚಯ ಮಾಡಿಕೊಟ್ಟರು. ಪ್ರಾಧ್ಯಾಪಕಿ ಪದ್ಮಿನಿ ನಾಗರಾಜು ಅಭಿನಂದನ ನುಡಿಗಳನ್ನಾಡಿದರು. ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಅಧ್ಯಕ್ಷತೆ ವಹಿಸಿದರು. ನಿವೃತ್ತ ಇಂಜಿನಿಯರ್ ಕೆ.ಜೆ. ಪಾರ್ಶ್ವನಾಥ ಉಪಸ್ಥಿತರಿದ್ದರು.

## ಸನ್ಮಾನ



**ಮೂಡುಬಿದಿರೆ :** ಕವಿ, ಸಾಹಿತಿ, ಸಂಗೀತಗಾರರ, ಕಲಾಭೂಷಣ, ಜಿನಗಾನ ಖ್ಯಾತಿಯ ಶ್ರೀ ರವಿರಾಜ್ ಇವರನ್ನು ಇಲ್ಲಿಯ ಜೈನ್ ಮಿಲನ್ ವತಿಯಿಂದ ಸನ್ಮಾನಿಸಲಾಯಿತು. ಮೂಡುಬಿದಿರೆ ಎಂ.ಸಿ.ಎಸ್. ಬ್ಯಾಂಕಿನ ಸಭಾಭವನದಲ್ಲಿ ಜರುಗಿದ ಈ ಸಮಾರಂಭದಲ್ಲಿ ನೋಟರಿ ವಕೀಲ ಎಂ. ಬಾಹುಬಲಿ ಪ್ರಸಾದ್, ಜೈನ್ ಮಿಲನ್‌ನ ನಿರ್ದೇಶಕ ಎಂ. ಜಯರಾಜ ಕಂಬಳಿ, ನೋಟರಿ ವಕೀಲೆ ಶ್ವೇತಾ ಜೈನ್ ಮತ್ತು ಮಿಲನ್ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಸದಸ್ಯರುಗಳು ಉಪಸ್ಥಿತರಿದ್ದರು. ಕಳೆದ 50 ವರ್ಷಗಳಿಂದ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅಮೋಘ ಸೇವೆ ಸಲ್ಲಿಸುತ್ತಿರುವ ಶ್ರೀ ರವಿರಾಜ್ ಅವರ ಬಹುಮುಖ ಸಾಧನೆಯನ್ನು ಶ್ಲಾಘಿಸಲಾಯಿತು.

### ಹೊಂಬುಜದಲ್ಲಿ ಗೃಹರಕ್ಷಕರ ವಾರ್ಷಿಕ ಮೂಲ ತರಬೇತಿ ಶಿಬಿರ ಉದ್ಘಾಟನೆ

# "ಗೃಹ ರಕ್ಷಕದಳದವರ ಸೇವೆ ಅನನ್ಯವಾದುದು"

-ಉಪವಿಭಾಗಾಧಿಕಾರಿ ಶ್ರೀ ವೀರೇಶ್ ಕುಮಾರ್




**ಹೊಂಬುಜ :** ಅತಿಶಯ ಶ್ರೀಕ್ಷೇತ್ರದಲ್ಲಿ ರಾಜ್ಯ ಗೃಹರಕ್ಷಕ ದಳದವರ ವಾರ್ಷಿಕ ತರಬೇತಿ-ಮಾರ್ಗದರ್ಶನ ಶಿಬಿರವು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಜಿಗಳವರ ಆಶೀರ್ವಾದದೊಂದಿಗೆ ದಿನಾಂಕ 21-06-2025ರಂದು ಉದ್ಘಾಟನೆಗೊಳಿಸಲಾಯಿತು.

ಸಾಗರ ಉಪವಿಭಾಗದ ಸಹಾಯಕ ಆಯುಕ್ತರಾದ ಶ್ರೀ ವೀರೇಶ್ ಕುಮಾರ್‌ರವರು **"ಗೃಹ ರಕ್ಷಕ ದಳದವರು ಸಮಾಜದ ನಾಗರೀಕರ ಹಿತಚಿಂತಕರಾಗಿ, ಸುರಕ್ಷಿತತೆ, ಸಹಾಯ ಒದಗಿಸುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣವು ದೇಶದ ಕಾನೂನು ಸುವ್ಯವಸ್ಥೆಯ ಪ್ರಧಾನ ಸೇವೆ ಎಂದಾಗುತ್ತದೆ"** ಎಂದು ಶುಭ ಕೋರಿದರು. ಗೃಹ ರಕ್ಷಕ ದಳದವರ ಕರ್ತವ್ಯ ನಿರ್ವಹಣೆ, ಕಾರ್ಯಕ್ಷಮತೆ ಬಗ್ಗೆ ಶ್ಲಾಘಿಸಿದರು.

ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಆಡಳಿತಾಧಿಕಾರಿ ಸಿ.ಡಿ. ಅಶೋಕ ಕುಮಾರ್‌ರವರು ಸಹಾಯಕ ಆಯುಕ್ತರವರನ್ನು ಗೌರವಿಸಿದರು. ಈ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲಾ ಗೃಹರಕ್ಷಕದಳದ ಸಮಾದೇಷ್ಠರಾದ ಡಾ. ಚೇತನ್ ಕುಮಾರ್ ಹೆಚ್.ಪಿ. ಡೆಪ್ಯೂಟಿ ಕಮಾಂಡೆಂಟ ಹಾಲಪ್ಪ ಎಸ್. ಜಿಲ್ಲಾ ಅಕಾಡೆಮಿ ಕಮಾಂಡೆಂಟ್ ಮತ್ತು ಪ್ಲಟೂನ್ ಕಮಾಂಡರ್ ಟಿ. ಶಶಿಧರ್ ಆಚಾರ್, ಸ್ಟಾಪ್ ಆಫೀಸರ್ ಹರೀಶ ಪಾಟೀಲ್ ಇನ್ನಿತರರು ಇದ್ದರು. ಗೃಹರಕ್ಷಕದಳದ ಸದಸ್ಯರು ಹತ್ತು ದಿನಗಳ ಪರ್ಯಂತ ವಿವಿಧ ಮಾಹಿತಿಗಳನ್ನು ಸಂಪನ್ಮೂಲ ವ್ಯಕ್ತಿಗಳಿಂದ ಪಡೆಯಲಿದ್ದಾರೆಂದು ತಿಳಿಸಿದರು.

ಡೆಪ್ಯೂಟಿ ಕಮಾಂಡೆಂಟ್ ಹಾಲಪ್ಪರವರು ಸ್ವಾಗತಿಸಿದರು. ಪ್ರವೀಣ್ ಕಾರ್ಯಕ್ರಮವನ್ನು ನಿರೂಪಿಸಿ ಧನ್ಯವಾದವಿತ್ತರು. ಈ ಸಂದರ್ಭದಲ್ಲಿ 100 ಹೆಚ್ಚು ಶಿಬಿರಾರ್ಥಿಗಳು ಇದ್ದರು.

WWW.HOMBUJAPADMAVATI.ORG

### ಹೊಂಬುಜದಲ್ಲಿ ಗೃಹರಕ್ಷಕರ ವಾರ್ಷಿಕ ಮೂಲ ತರಬೇತಿ ಶಿಬಿರ ಸಮಾರೋಪ

# "ಗೃಹರಕ್ಷಕರು ಪೊಲೀಸ್ ಇಲಾಖೆಯ ಬಲಗೈ ಇದ್ದಂತೆ"

-ತೀರ್ಥಹಳ್ಳಿ ಉಪವಿಭಾಗದ ಡಿ.ವೈ.ಎಸ್ಪಿ ಅರವಿಂದ್




**ಹೊಂಬುಜ :** ಗೃಹರಕ್ಷಕ ದಳದವರು ಪೊಲೀಸ್ ಇಲಾಖೆಯೊಂದಿಗೆ ಸಮಾಜದ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಗೃಹರಕ್ಷಕ ದಳ ಪೊಲೀಸ್ ಇಲಾಖೆಯ ಬಲಗೈ ಇದ್ದಂತೆ ಎಂದು ತೀರ್ಥಹಳ್ಳಿ ಉಪವಿಭಾಗದ ಡಿವೈಎಸ್ಪಿ ಅರವಿಂದ್ ಅಭಿಪ್ರಾಯಪಟ್ಟರು.

ಹೊಂಬುಜ ಮಠದ ಆವರಣದಲ್ಲಿ ನಡೆಯುತ್ತಿರುವ 10 ದಿನಗಳ ಜಿಲ್ಲಾ ಗೃಹರಕ್ಷಕ ದಳ ಆಯೋಜಿಸಿದ್ದ ಗೃಹರಕ್ಷಕರ ವಾರ್ಷಿಕ ಮೂಲ ತರಭೇತಿ ಶಿಬಿರದಲ್ಲಿ ಮಾದಕ ವಸ್ತುಗಳ ಸಾಗಾಣಿಕೆ ಮತ್ತು ಮಾರಾಟದ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗೃಹ ರಕ್ಷಕ ದಳವನ್ನು 1962ರಲ್ಲಿ ಸ್ಥಾಪನೆ ಮಾಡಲಾಯಿತು. ಅಂದಿನಿಂದ ಇಂದಿನವರೆಗೆ ಗೃಹರಕ್ಷಕ ದಳದವರು ಪೊಲೀಸ್ ಇಲಾಖೆಯೊಂದಿಗೆ ಸಮಾಜದ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಹಿಂದೆ ಸ್ವಯಂ ಸೇವಕರಾಗಿ ದುಡಿಯಲು ಗೃಹರಕ್ಷಕ ದಳಕ್ಕೆ ಸೇರುವ ಜನರ ಸಂಖ್ಯೆ ವಿರಳವಾಗಿತ್ತು. ಆದರೆ ಕಾಲಕ್ರಮೇಣ ಭಾರತೀಯ ಸೈನ್ಯ, ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಲು ಆಸಕ್ತಿ ಇದ್ದು ಅವಕಾಶದಿಂದ ವಂಚಿತರಾದವರು, ಗೃಹರಕ್ಷಕ ಸೇರಿದರೆ ಸೈನಿಕ, ಪೊಲೀಸರಂತೆ ಕೆಲಸ ಮಾಡಬಹುದು ಎಂಬ ದೃಷ್ಟಿಯಿಂದ ಇತ್ತೀಚಿನ ದಿನಗಳಲ್ಲಿ ಗೃಹರಕ್ಷಕ ದಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ ಎಂದರು.

ಸಮವಸ್ತ್ರದಲ್ಲಿದ್ದಾಗ ಶಿಸ್ತು, ಪ್ರಾಮಾಣಿಕರ ಹಾಗೂ ಶ್ರದ್ಧೆಯಿಂದ ಕಾರ್ಯನಿರ್ವಹಿಸಬೇಕಾಗುತ್ತದೆ ಎಂದರು.

ಹೊಸನಗರ ಸಿಪಿಐ ಗುರಣ್ಣ ಹೆಬ್ಬಾಳ್, ಅಬಕಾರಿ ವೃತ್ತ ನಿರೀಕ್ಷಕ ನಾಗರಾಜ್, ಪಿಎಸ್ಐ ರಾಜುರೆಡ್ಡಿ ಹಾಗೂ ಇನ್ನಿತರರಿದ್ದರು.

ಜೂ. 21 ರಿಂದ 30ರವರೆಗೆ 10 ದಿನಗಳ ಕಾಲ ನಡೆದ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಯ ಸಂಪನ್ಮೂಲ ವ್ಯಕ್ತಿಗಳು ಆಗಮಿಸಿ ಶಿಬಿರಾರ್ಥಿಗಳಿಗೆ ವಿಶೇಷ ತರಬೇತಿ ನೀಡಿದರು.

## 'ಅನಂತನೋಂಪಿ ಪೂಜಾ ಸಂಗ್ರಹ ಶಾಸ್ತ್ರ ಗ್ರಂಥ' ಲಭ್ಯ




ಶ್ರೀಕ್ಷೇತ್ರ ಸೋಂದ ಜೈನ ಮಠದ ಪರಮಪೂಜ್ಯ ಅಕಲಂಕಕೇಸರಿ ಸ್ವಸ್ತಿಶ್ರೀ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿ ಯವರ ಪ್ರಧಾನ ಸಂಪಾದಕತ್ವದಲ್ಲಿ ರಾಜ್ಯದ ಎಲ್ಲಾ ಜಿನಮಂದಿರಗಳಲ್ಲಿ ಏಕ ರೀತಿಯ ನೋಂಪಿ ಆಚರಣೆ ನಡೆಸುವ ಸದುದ್ದೇಶದಿಂದ ಕರ್ನಾಟಕದ ಜೈನ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ಸಂಪೂರ್ಣ ವಿಧಿ ವಿಧಾನ ಮತ್ತು ಪೂಜಾ ಆಚರಣೆ, ದಶಲಕ್ಷಣ ಪರ್ವ ಆಚರಣೆ, ಅನಂತನೋಂಪಿ ಮತ್ತು ಉದ್ಯಾಪನೆ ಸಹಿತ ಸಂಪೂರ್ಣ ಪೂಜಾ ವಿಧಿ ವಿಧಾನಗಳನ್ನು ಒಳಗೊಂಡ ಸುಮಾರು 400 ಪುಟಗಳ **'ಅನಂತನೊಂಪಿ ಪೂಜಾ ಸಂಗ್ರಹ ಶಾಸ್ತ್ರ ಗ್ರಂಥ'** ದಾವಣಗೆರೆಯ ಶ್ರೀ ಮಹಾವೀರ ಸಂಘದ ವತಿಯಿಂದ ಮುದ್ರಣಗೊಂಡಿದ್ದು, ಆಸಕ್ತ ಧರ್ಮ ಬಂಧುಗಳು ಹಾಗೂ ವ್ರತಾರ್ಥಿಗಳು ಈ ಶಾಸ್ತ್ರ ಗ್ರಂಥವನ್ನು ಈ ಕೆಳಕಂಡ ಸಂಪರ್ಕ ಸಂಖ್ಯೆಯನ್ನು ಸಂಪರ್ಕಿಸಿ ರೂ. 300/– ಗಳನ್ನು ಪಾವತಿಸಿ ಪಡೆಯಬಹುದೆಂದು ದಾವಣಗೆರೆ ಶ್ರೀ ಮಹಾವೀರ ಸಂಘ (ರಿ.) ದ ಅಧ್ಯಕ್ಷರಾದ ಶ್ರೀ ಡಿ. ಸುನೀಲ್‌ಕುಮಾರ್‌ರವರು ತಿಳಿಸಿದ್ದಾರೆ. ವ್ರತಾರ್ಥಿಗಳಿಗೆ ಅಂಚೆ ವೆಚ್ಚ ಉಚಿತ. ಸಂಪರ್ಕ ಸಂಖ್ಯೆ: 99869 16746.

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

2025–26ನೇ ಸಾಲಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಅರ್ಹ ಅಲ್ಪಸಂಖ್ಯಾತರ ಸಮುದಾಯ ಜೈನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಹಲವು ಸೌಲಭ್ಯಗಳನ್ನು ಕರ್ನಾಟಕ ಸರ್ಕಾರವು ನೀಡಿದ್ದು ಅದರ ಮಾಹಿತಿ ಈ ಕೆಳಕಂಡತಿದೆ.

1. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ (1ರಿಂದ 8ನೇ ತರಗತಿ) ಯೋಜನೆಯಡಿ SSP Portal ನಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
2. ಪಿ.ಯು.ಸಿ. ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ, ತಾಂತ್ರಿಕ ಮತ್ತು ವೃತ್ತಿಪರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ನಂತರದ ಶುಲ್ಕ ಮರುಪಾವತಿ ಯೋಜನೆಯಡಿ SP Portalನಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
3. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
4. Ph.D. ಸಂಶೋಧನೆ ಮಾಡುತ್ತಿರುವ ಅರ್ಹ ಅಲ್ಪಸಂಖ್ಯಾತರ ಸಮುದಾಯದ ಸಂಶೋಧನಾರ್ಥಿಗಳಿಗೆ J.R.F. ಮಾದರಿಯಲ್ಲಿ ಫೆಲೋಶಿಪ್ ನೀಡಲು ಅನ್‌ಲೈನ್ ಮೂಲಕ ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
5. IIT, IIIT, NIT, IIM, IISER, AIIMS, NLU & IUSLA, etc ಸರ್ಕಾರದಿಂದ ಶಾಸನಬದ್ಧ ಅನುಮತಿ ಪಡೆದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೋರ್ಸ್‌ನ ಪೂರ್ಣ ಅವಧಿಯಲ್ಲಿ ಒಂದುಬಾರಿಗೆ ಪ್ರೋತ್ಸಾಹಧನ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.
6. B.Sc, Nursing and GNM Nursing Course ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಎಲ್ಲಾ ವಿದ್ಯಾರ್ಥಿಗಳಿಗೆ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30–09–2025.

WWW.HOMBUJAPADMAVATI.ORG

– ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಕ್ಕೆ ಸಂಪರ್ಕಿಸಿ

## ಬೆಳ್ತಂಗಡಿ : ಜೈನ ವಿದ್ಯಾರ್ಥಿ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಜೈನ ಧರ್ಮೀಯ ವಿದ್ಯಾರ್ಥಿಗಳಿಗೆ ಕೆಲ್ಲಗುತ್ತು ಸಬ್ರಬೈಲು ಕಿನ್ಯಮ್ಮ ಯಾನೆ ಗುಣಾವತಿ ಅಮ್ಮ ಮೆಮೋರಿಯಲ್ ಟ್ರಸ್ಟ್ (ರಿ) ಹಾಗೂ ಶ್ರಾವಕ ಬಂಧುಗಳ ಸರ್ವ ಸಹಕಾರದಿಂದ ವಿದ್ಯಾರ್ಥಿ ಪ್ರೋತ್ಸಾಹ ಧನವನ್ನು ಕಳೆದ ಹಲವಾರು ವರ್ಷಗಳಿಂದ ನೀಡುತ್ತಾ ಬರಲಾಗುತ್ತಿದ್ದು, ಅದೇ ರೀತಿ 2025–26ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು 21–09–2025ರಂದು ಹೊಂಬುಜ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ಪ್ರೋತ್ಸಾಹ ಧನವನ್ನು ನೀಡಲಾಗುವುದು.

ಎಸ್.ಎಸ್.ಎಲ್.ಸಿ ಗಿಂತ ಮೇಲ್ಪಟ್ಟು ಪಿಯುಸಿ, ಪದವಿ, ಐಟಿಐ, ಪಾಲಿಟೆಕ್ನಿಕ್, ಬಿಬಿಎಂ, ಎಂಬಿಎ, ಇಂಜಿನಿಯರಿಂಗ್, ವೈದ್ಯಕೀಯ ಇನ್ನಿತರ ವ್ಯಾಸಂಗವನ್ನು ಮುಂದುವರಿಸುತ್ತಿರುವ ವಿದ್ಯಾರ್ಥಿಗಳು ಮಾತ್ರ ನಿಗದಿತ ಅರ್ಜಿ ನಮೂನೆಯಲ್ಲಿಯೇ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿಯನ್ನು ಶ್ರೀ ರತ್ನತ್ರಯ ಜೈನ ತೀರ್ಥಕ್ಷೇತ್ರದ ಕಚೇರಿಯಲ್ಲಿ ಪಡೆದುಕೊಳ್ಳುವುದು ಮತ್ತು ಅರ್ಜಿಯೊಂದಿಗೆ ವ್ಯಾಸಂಗ ಪ್ರಮಾಣ ಪತ್ರ, ಅಂಕಪಟ್ಟಿಯ ಯಥಾಪ್ರತಿ, ಪ್ರಸ್ತುತ ಮನೆಯ ವಿಳಾಸ, ಆಧಾರ್ ಕಾರ್ಡ್, ಸಂಪರ್ಕ ಸಂಖ್ಯೆ, ತಂದೆ ಮತ್ತು ತಾಯಿಯ ಹೆಸರು ನಮೂದಿಸಿ ಇವರಿಬ್ಬರಲ್ಲಿ ಒಬ್ಬರ ಸಹಿಯೊಂದಿಗೆ ಆಗಸ್ಟ್ 31ರ ಒಳಗೆ ಕೆ. ಜಯವರ್ಮರಾಜ್ ಬಳ್ಳಾಲ್, ಮ್ಯಾನೇಜಿಂಗ್ ಟ್ರಸ್ಟಿ, ಕೆಲ್ಲಗುತ್ತು ಸಬ್ರಬೈಲು ಕಿನ್ಯಮ್ಮ ಯಾನೆ ಗುಣಾವತಿ ಅಮ್ಮ ಮೆಮೋರಿಯಲ್ ಟ್ರಸ್ಟ್ (ರಿ,) ಶ್ರೀ ರತ್ನತ್ರಯ ಜೈನ ತೀರ್ಥಕ್ಷೇತ್ರ, ಜೈನ್ ಪೇಟೆ, ಬೆಳ್ತಂಗಡಿ,–574214 ದಕ್ಷಿಣ ಕನ್ನಡ ಈ ವಿಳಾಸಕ್ಕೆ ತಲುಪುವಂತೆ ಕಳುಹಿಸಿಕೊಡಬೇಕು.

ಅದೇ ರೀತಿ ಉಭಯ ಜಿಲ್ಲೆಗಳಲ್ಲಿ ತೀವ್ರತರದ ಕಾಯಿಲೆಗಳಾದ ಕ್ಯಾನ್ಸರ್, ಕಿಡ್ನಿ, ಹೃದಯ ಸಂಬಂಧಿ ಇನ್ನಿತರ ಕಾಯಿಲೆಗಳಿಂದ ಬಳಲುತ್ತಿರುವ ಜೈನ ಸಮಾಜದ ಅರ್ಹ ಬಂಧುಗಳು ಕೂಡ ಈ ಬಗ್ಗೆ ಈ ಕೆಳಗಿನ ವಿಳಾಸದಾರರನ್ನು ಸಂಪರ್ಕಿಸಿದ್ದಲ್ಲಿ ಪರಿಶೀಲಿಸಿ ಅಗತ್ಯ ನೆರವು ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ 08256–233577 ಅಥವಾ 9448180439, 8310381962 ಸಂಖ್ಯೆಯ ದೂರವಾಣಿಯನ್ನು ಸಂಪರ್ಕಿಸಬಹುದೆಂದು ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಕೆ. ಜಯವರ್ಮರಾಜ್ ಬಳ್ಳಾಲ್ ರವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

## ಹೊಂಬುಜ ಜೈನ ಮಠದಲ್ಲಿ ಪಶು ವೈದ್ಯಕೀಯ ಕುರಿತು ವಿಶೇಷ ಕಾರ್ಯಾಗಾರ





**ಹೊಂಬುಜ :** ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಆಶೀರ್ವಾದದೊಂದಿಗೆ ಇಲ್ಲಿಯ ಜೈನ ಮಠದ ಆಶ್ರಯದಲ್ಲಿ ಶ್ರೀ ಆಂಜನೇಯ ದೇವಸ್ಥಾನ ಹಾಗೂ ರೋಟರಿ ಕ್ಲಬ್‌ನ ಸಹಯೋದದಲ್ಲಿ ಜುಲೈ 14 ರಿಂದ 16ರವರೆಗೆ ಮೂರು ದಿನಗಳ ಕಾಲ ಶ್ರೀಮಠದ ವಸತಿ ಗೃಹದ ಸಭಾಂಗಣದಲ್ಲಿ ಪಶು ವೈದ್ಯಕೀಯ ಚಿಕಿತ್ಸೆಯ ಸವಾಲುಗಳಿಗೆ ಪಶು ಆಯುರ್ವೇದ ಮತ್ತು ಪರ್ಯಾಯ ವಿವಿಧ ಪದ್ಧತಿಗಳ ಬಗ್ಗೆ ವಿಶೇಷ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಈ ವೈಶಿಷ್ಟ ಕಾರ್ಯಾಗಾರವನ್ನು ಮಾಜಿ ಗೃಹ ಸಚಿವರೂ, ಹಾಲಿ ಶಾಸಕರಾದ ಆರಗ ಜ್ಞಾನೇಂದ್ರ ಉದ್ಘಾಟಿಸಿ ಮಾತನಾಡಿದರು.

ಪುರಾತನ ಕಾಲದಲ್ಲಿ ಋಷಿ ಮುನಿಗಳು ಹಾಗೂ ನಮ್ಮ ಪೂರ್ವಜರು ಅನಾರೋಗ್ಯ ಪೀಡಿತರಾದಾಗ ಗಿಡಮೂಲಿಕೆಗಳ ಆಯುರ್ವೇದ ಪದ್ಧತಿಯ ಔಷಧಿ ಬಳಸಿ ಆರೋಗ್ಯವಂತರಾಗಿ ಜೀವನ ನಡೆಸುತ್ತಿದ್ದರು. ಹಾಗೆಯೇ ಜಾನುವಾರುಗಳ ಕಾಯಿಲೆಗಳಿಗೆ ಗಿಡಮೂಲಿಕೆಯ ಆಯುರ್ವೇದ ಔಷಧಿ ಬಳಸುತ್ತಿದ್ದರು. ನಂತರ ಕಾಲಕ್ರಮೇಣ ನಾಟಿ ವೈದ್ಯಕೀಯ ಪದ್ದತಿಯ ಬಳಕೆ ಕಡಿಮೆಯಾಯಿತು. ಇಂತಹ ಕಾಲಘಟ್ಟದಲ್ಲಿ ಶ್ರೀ ಕ್ಷೇತ್ರದ ಪೂಜ್ಯ ಸ್ವಾಮೀಜಿಯವರು ಜನರಿಗೆ ಪುನಃ ಆಯುರ್ವೇದ ಔಷಧಿ ಬಳಕೆಯ ಬಗ್ಗೆ ಎಲ್ಲಾ ಪಶು ವೈದ್ಯಾಧಿಕಾರಿಗಳಿಂದ ಮಾಹಿತಿ ದೊರಕಲು ಮೂರು ದಿನಗಳ ಕಾಲ ನುರಿತ ತಜ್ಞರುಗಳಿಂದ ವಿಶೇಷ ಕಾರ್ಯಾಗಾರವನ್ನು ಹಮ್ಮಿಕೊಂಡಿರುವುದು ಇಂದಿನ ದಿನಗಳಿಗೆ ಅತ್ಯಾವಶ್ಯಕವಾಗಿದೆ ಎಂದರು.

ಅಧ್ಯಕ್ಷತೆಯನ್ನು ಅಭಿಷೇಕ್ ವಹಿಸಿದ್ದರು. ಶ್ರೀಮಠದ ಟ್ರಸ್ಟಿನ ಕಾರ್ಯದರ್ಶಿಯಾದ ತೀರ್ಥಹಳ್ಳಿಯ ವೈದ್ಯರಾದ ಡಾ. ಜೀವಂಧರ್ ಜೈನ್, ಪಶುಪಾಲನಾ ಇಲಾಖೆಯ ಡಾ. ಬಾಬುರಾವ್, ಕೃಷ್ಣರೆಡ್ಡಿ ಹಾಗೂ ರೋಟರಿ ಕ್ಲಬ್‌ನ ಅಧ್ಯಕ್ಷ ಕೆ.ಆರ್. ಸದಾಶಿವ ಉಪಸ್ಥಿತರಿದ್ದರು. ರಾಜ್ಯದಾದ್ಯಂತ ಬಂದ ಪಶು ವೈದ್ಯಾಧಿಕಾರಿಗಳು ಈ ಶಿಬಿರದಲ್ಲಿ ಪಾಲ್ಗೊಂಡಿದ್ದರು.

## ಪ್ರೀತಲ್ ಕಳಸೂರು ಇವರಿಗೆ Ph.D




ಪುಣೆಯ ಡಿ.ವೈ. ಪಾಟೀಲ್ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಪ್ರೊಫೆಸರ್‌ರಾದ ಪ್ರೀತಲ್ ಗೌತಮ್ ಕಳಸೂರು (M.Tech) ಇವರಿಗೆ ನಾಸಿಕ್ ಸಂದೀಪ್ ಯೂನಿವರ್ಸಿಟಿಯಿಂದ Ph.D ಪದವಿಗಳಿಸಿದ್ದಾರೆ. ಡಾ. ಅರುಣಕುಮಾರ್ ದ್ವಿವೇದಿ ಇವರ ಮಾರ್ಗದರ್ಶನದಲ್ಲಿ Cement Reduction by mixing with Sugarcane bagasse ash to making bricks ಈ ವಿಷಯದಲ್ಲಿ ಪ್ರಬಂಧ ಮಂಡಿಸಿದ್ದರು.

ಹೊಂಬುಜದ ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಜಗನ್ಮಾತೆ ಶ್ರೀ ಪದ್ಮಾವತಿ ಅಮ್ಮನವರ ಆಶೀರ್ವಾದದಿಂದ ಇವರು ಸ್ವ ಚೇತೋಹಾರಿ ಪ್ರಯತ್ನದಲ್ಲಿ ಯಶಸ್ಸು ಲಭಿಸಿದ್ದಕ್ಕೆ ಪರಮಪೂಜ್ಯ ಶ್ರೀಗಳವರು ಶುಭ ಹಾರೈಸಿದ್ದಾರೆ. ಡಾ. ಪ್ರೀತಲ್ ಪುಣೆಯ ಶ್ರೀ ಪದ್ಮರಾಜ ಇವರ ಸೊಸೆ ಹಾಗೂ ಬೆಳಗಾವಿಯ ಶ್ರೀಮತಿ ಶಶಿಕಲಾ ಮಲಗಾವೆ ಇವರ ಪುತ್ರಿಯಾಗಿದ್ದಾರೆ.

ಗುರುದೇವ GURUDEVA MONTHLY

RNI No. 13248/57-POSTEL REGD No. KA/SK/SMG 198/2024-26
Date of Posting 17th of every month. Sub Post office, Humcha - 577436
Licensed to post without prepayment Licence No: SK/WPP/226/2024-26

ವಾರ್ಷಿಕ ಚಂದಾ : ರೂಪಾಯಿ 150–00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000–00 ಮಾತ್ರ.

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬.

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722